ಆ)	ಗಂಗಾ ಕಲ್ಯಾಣ ಯೋಜನೆ	ಗಿರಿಜನ ಉಪಯೋಜನೆ
೧೯೮೪-೮೫	ಆರಬಗೆರೆ	ಜಡತಡೆಗಳ್ಳಕ್ಕೆ ಎತ್ತು ಅಣೆ ನಿರ್ಮಾಣ
೧೯೮೫-೮೬	—	—
೧೯೮೬-೮೭	ಚೊಮ್ಮನಗಡ್ಡೆ	

೪) ೨೫೩.೭೫೩ ಲಕ್ಷ ರೂಪಾಯಿಗಳು ೧೩೭೦ ಎಕರೆಗಳು

ಪಶ್ಚಿಮ ಘಟ್ಟಗಳಯೋಜನೆಗಳು.

೧೫೧೨. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಪಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಪಶ್ಚಿಮ ಘಟ್ಟಗಳ ಯೋಜನೆ ಯಾವ ಯಾವ ತಾಲ್ಲೂಕುಗಳಲ್ಲಿ ಕೈಗೊಳ್ಳಲಾಗಿದೆ;

ಆ) ಹೊಸನಗರ ತಾಲ್ಲೂಕಿನ ಘಟ್ಟ ಪ್ರದೇಶದಲ್ಲಿರುವ ನಗರ ಹೋಬಳಿ, ಈ ಯೋಜನೆಯಲ್ಲಿ ಸೇರದಿರಲು ಕಾರಣವೇನು ?

ಇ) ಯಾವ ಯಾವ ತಾಲ್ಲೂಕಿಗೆ ಎಷ್ಟೆಷ್ಟು ಹಣ ಖರ್ಚಾಗಿದೆ ?

ಶ್ರೀ ಹೆಚ್. ಡಿ. ದೇವೆಗೌಡ (ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು).—

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಶಿವಮೊಗ್ಗ, ಸಾಗರ, ಹೊಸನಗರ, ತೀರ್ಥಹಳ್ಳಿ ಮತ್ತು ಶಿಕಾರಿಪುರ ತಾಲ್ಲೂಕುಗಳಲ್ಲಿ ಪಶ್ಚಿಮ ಘಟ್ಟಗಳ ಯೋಜನೆಯನ್ನು ಕೈಗೊಳ್ಳಲಾಗಿದೆ.

ಆ) ಹೊಸ ನಗರ ತಾಲ್ಲೂಕು ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಯಲ್ಲಿ ಸೇರಿರುವುದರಿಂದ ಆ ತಾಲ್ಲೂಕಿನ ಎಲ್ಲಾ ಹೋಬಳಿಗಳು ಸೇರಿರುತ್ತವೆ.

ಇ) ೧೯೮೪-೮೫ ಮತ್ತು ೮೫-೮೬ ರಲ್ಲಿ ಖರ್ಚಾದ ಹಣ ಈ ರೀತಿ ಇದೆ.

ಶಿವಮೊಗ್ಗ	...	೩೦.೬೨ ಲಕ್ಷ
ಸಾಗರ	...	೩೪.೩೫
ಹೊಸನಗರ	...	೨೩.೦೧
ತೀರ್ಥಹಳ್ಳಿ	...	೧೬.೨೦
ಶಿಕಾರಿಪುರ	...	೨೨.೮೬

ಖಾಸಗಿ ಶಾಲೆಗಳನ್ನು ರಾಷ್ಟ್ರೀಕರಣ ಮಾಡುವುದು.

೧೫೧೦. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಸಚಿವರು ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಅನುದಾನ ಪಡೆಯುತ್ತಿರುವ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳೆಷ್ಟು ?

ಆ) ಅನುದಾನ ಪಡೆಯದಿರುವ ಖಾಸಗಿ ಶಾಲೆಗಳ ಸಂಖ್ಯೆ ಎಷ್ಟು ? (ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು)

ಇ) ಅನುದಾನವನ್ನು ಪಡೆಯುತ್ತಿರುವ ಶಾಲೆಗಳ ಖರ್ಚನ್ನು ಸರ್ಕಾರದವರು ಕೊಡುತ್ತಿರುವ ಅನುದಾನದ ಶೇಕಡಾ ಪ್ರಮಾಣವೆಷ್ಟು ?

ಈ) ಅನುದಾನವನ್ನು ಕೊಟ್ಟು ಅಪ್ರಾಮಾಣಿಕ ವರ್ತನೆಗಳಿಗೆ ಅವಕಾಶ ಕೊಡುವ ಬದಲು ಈ ಶಾಲೆಗಳನ್ನು ಸರ್ಕಾರದವರೇ ವಹಿಸಿಕೊಳ್ಳಲು ಯೋಚಿಸಿದ್ದಾರೆಯೇ ? ಹಾಗಿಲ್ಲದಿದ್ದಲ್ಲಿ ಕಾರಣಗಳೇನು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ಅನುದಾನವನ್ನು ಪಡೆಯುತ್ತಿರುವ ಪ್ರಾಥಮಿಕ ಶಾಲೆಗಳು–೧೯೪೫ ಅನುದಾನವನ್ನು ಪಡೆಯುತ್ತಿರುವ ಖಾಸಗಿ ಪ್ರೌಢ ಶಾಲೆಗಳು–೧೭೬೩.

ಆ) ಅನುದಾನವನ್ನು ಪಡೆಯದಿರುವ ಖಾಸಗಿ ಪ್ರಾಥಮಿಕ ಶಾಲೆಗಳು–೮೩೬ ಅನುದಾನವನ್ನು ಪಡೆಯದಿರುವ ಪ್ರೌಢ ಖಾಸಗಿ ಶಾಲೆಗಳು–೨೩೩.

ಇ) ಶೇ. ೧೦೦ ರಷ್ಟು ವೇತನ ಅನುದಾನವನ್ನು ಶೇ. ೫ ರಷ್ಟು ನಿರ್ವಹಣಾ ಅನುದಾನವನ್ನು ಮಾತ್ರ ಸರ್ಕಾರ ನೀಡುತ್ತಿದೆ.

ಈ) ಇಂತಹ ಆಲೋಚನೆ ಸರ್ಕಾರಕ್ಕೆ ಇರುವುದಿಲ್ಲ. ಏಕೆಂದರೆ ಇಂತಹ ಅಪ್ರಮಾಣಿಕ ಶಾಲೆಗಳ ವಿರುದ್ಧ ಸರ್ಕಾರವು ಅನುದಾನ ಸಂಹಿತೆಯನ್ವಯ ಅಗಿಂದಾಗ್ಗೆ ಕ್ರಮ ಕೈಗೊಳ್ಳುತ್ತಿದೆ.

ಲೋಕೋಪಯೋಗಿ ಇಲಾಖೆಯಲ್ಲಿ ವಾಹನ ಚಾಲಕರ ಬಗ್ಗೆ

೧೪೬೦. ಶ್ರೀ ಪಂಪಾಪತಿ (ದಾವಣಗೆರೆ).— ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಲೋಕೋಪಯೋಗಿ ಇಲಾಖೆಯಲ್ಲಿರುವ ವಾಹನಗಳ ಸಂಖ್ಯೆ ಎಷ್ಟು ?

ಆ) ಸದರಿ ಇಲಾಖೆಯಲ್ಲಿರುವ ವಾಹನ ಚಾಲಕರ ಸಂಖ್ಯೆ ಎಷ್ಟು ?

ಇ) ಇವರಲ್ಲಿ ಖಾಯಂ ವಾಹನ ಚಾಲಕರ ಸಂಖ್ಯೆ ಎಷ್ಟು ? ಹಾಗೂ ದಿನಗೂಲಿ ಅಥವಾ ತಾತ್ಕಾಲಿಕ ವಾಹನ ಚಾಲಕರ ಸಂಖ್ಯೆ ಎಷ್ಟು ?

ಈ) ಖಾಯಂ ಆಗಿ ಉಪಯೋಗಿಸುತ್ತಿರುವ ವಾಹನಗಳ ಸಂಖ್ಯೆ ಎಷ್ಟು ?

ಉ) ದಿನಗೂಲಿ/ತಾತ್ಕಾಲಿಕ ವಾಹನ ಚಾಲಕರ ವೇತನ ಎಷ್ಟು ? ಹಾಗೂ ಅವರ ಸೇವಾ ನಿಯಮಗಳೇನು ?

ಊ) ಮೇಲ್ಕಂಡ ಚಾಲಕರನ್ನು ಖಾಯಂಗೊಳಿಸಲು ಸರ್ಕಾರದವರು ಯೋಚಿಸಿದ್ದಾರೆಯೇ ? ಹಾಗಿದ್ದಲ್ಲಿ ಅವರನ್ನು ಯಾವಾಗ ಖಾಯಂಗೊಳಿಸಲಾಗುವುದು ? ಹಾಗದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮಂತ್ರಿ ನೀರಾವರಿ ಮಂತ್ರಿಗಳು).—

ಅ) ೪,೧೬೭

ಆ) ೩,೪೨೮

ಇ) ಖಾಯಂ ಚಾಲಕರು ೨,೨೭೪
ದಿನಗೂಲಿ ತಾತ್ಕಾಲಿಕ ಚಾಲಕರು ೧,೧೫೪

ಈ) ೩,೨೭೦

ಉ) ದಿನಗೂಲಿ ನೌಕರರಿಗೆ ರೂ. ೧೭ ರಿಂದ ರೂ. ೨೮ ರವರೆಗೆ ದಿನಗೂಲಿ ಪಾವತಿ ಮಾಡಲಾಗುತ್ತದೆ ಇವರಿಗೆ ಪ್ರತ್ಯೇಕ ಸೇವಾ ನಿಯಮಗಳೇನೂ ಇರುವುದಿಲ್ಲ. ವರ್ಕ್‌ಚಾರ್ಜ್ಡ್ ಚಾಲಕರಿಗೆ ಖಾಯಂ ನೌಕರರಿಗಿರುವ ಎಲ್ಲಾ ಸೌಲಭ್ಯಗಳೂ ಇವೆ.

ಊ) ವರ್ಕ್‌ಚಾರ್ಜ್ಡ್ ನೌಕರರಿಗೆ ಸಂಬಂಧಿಸಿದಂತೆ ವಿಲೀನೀಕರಣ ನಿಯಮಗಳನ್ನು ಹೊರಡಿಸಲಾಗಿದ್ದು ೧೯೮೮ರೊಳಗೆ ಎಲ್ಲಾ ವರ್ಕ್‌ಚಾರ್ಜ್ ಚಾಲಕರು ಸ್ವಾಭಾವಿಕವಾಗಿ ಖಾಯಂಗೊಳ್ಳುತ್ತಾರೆ.